ಸಾಕ್ಷಿಗೆ ದಿನಾಂಕ 23-08-2024 ರಂದು ಪ್ರಮಾಣ ವಚನ ಭೋದಿಸಲಾಯಿತು.

C.W.: 3 P.W.: 3

ಮುಂದುವರೆದ ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-

ಈ ಪ್ರಕರಣದ ಬಗ್ಗೆ ನನಗೆ ಏನೂ ಗೊತ್ತಿಲ್ಲ. ನಾನು ಹೂವಿನಹಡಗಲಿಯಲ್ಲಿ ಚಿಕನ್ ಅಂಗಡಿಯನ್ನು ನಡೆಸುತ್ತೇನೆ. ಈಗ ಸುಮಾರು 6-7 ವರ್ಷದ ಹಿಂದೆ ಪೋಲೀಸರು ನನ್ನ ಅಂಗಡಿ ಬಳಿ ಬಂದು ಒಂದು ದಾಖಲೆಗೆ ಸಹಿಯನ್ನು ಪಡೆದಿರುತ್ತಾರೆ. ಚಾಸಾ-2 ರವರು ಕೋಳಿಗಳನ್ನು ಸಾಗಣೆ ಮಾಡುವ ವಾಹನದ ಚಾಲಕರಾಗಿರುತ್ತಾರೆ. ಅವರು ನನಗೆ ಗೊತ್ತು ಪರಿಚಯ ಇರುವುದಿಲ್ಲ. ನನಗೆ ಆರೋಪಿತರ ಬಗ್ಗೆಯೂ ಸಹಾ ಯಾವುದೇ ಮಾಹಿತಿ ಇರುವುದಿಲ್ಲ. ನನಗೆ ಚಾಸಾ-2 ರವರು ಯಾವುದೇ ವಿಚಾರವನ್ನು ಪೋನ್ ಮೂಲಕ ತಿಳಿಸಿರುವುದಿಲ್ಲ.

(ಸಹಾಯಕ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ನೀಡಲು ಕೇಳಿಕೊಂಡಿದ್ದು ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಸ. ಸ. ಅಭಿಯೋಜಕರವರಿಂದಃ-

ಹಡಗಲಿ ನಗರದ 5 ನೇ ವಾರ್ಡಿನ ವಾಸಿಯಾದ ಚಾಸಾ-1 ರವರು ನನಗೆ ಸಂಬಂಧಿಕನಾಗಬೇಕು ಎಂದರೆ ಸರಿಯಲ್ಲ. ಸದರಿಯವನು ಕೊಟ್ಟೂರಿನ ಚಾಸಾ-5 ರವರ ಮಧ್ಯಸ್ಥಿಕೆಯಲ್ಲಿ ಕೊಟ್ಟೂರಿನ ಸುತ್ತಮುತ್ತ ಹಳ್ಳಿಗಳಿಂದ ಕೋಳಿಗಳನ್ನು ಹಡಗಲಿಯ ಚಿಕನ್ ಸೆಂಟರ್ ಗಳಿಗೆ ತನ್ನ ಸ್ವಂತ ಮಹೀಂದ್ರಾ ಬೋಲೇರೋ ಪಿಕಪ್ ನಂ. ಕೆಎ-35, ಬಿ-3064 ನೇದ್ದರಿಂದ ಸಪ್ಲೈ ಮಾಡುತ್ತಿದ್ದ, ಸದರಿ ವಾಹನಕ್ಕೆ ಚಾಲಕನು ಅಂತಾ ಪಿಂಜಾರ ಓಣಿಯ ಚಾಸಾ-1 ರವರು ಚಾಸಾ-2 ರವರನ್ನು ಚಾಲಕನಾಗಿ ನೇಮಿಸಿಕೊಂಡಿದ್ದ ಎಂದರೆ ಸರಿಯಲ್ಲ. ಚಾಸಾ-1 ರವರು ತಾನೇ ತನ್ನ ವಾಹನದಲ್ಲಿ ಮೇಲ್ಕಂಡ ಚಾಲಕನ ಜೊತೆ ಹಣ ತೆಗೆದುಕೊಂಡು ಹೋಗಿ ಕೋಳಿಗಳನ್ನು ತನ್ನ ವ್ಯಾನಿನಲ್ಲಿದ ಲೋಡ್ ಮಾಡಿಕೊಂಡು ಬರುತ್ತಿದ್ದನು ಎಂದರೆ ಸರಿಯಲ್ಲ. ದಿಃ22-04-2015 ರಂದು ಬೆಳಗಿನ ಜಾವ 5 ಗಂಟೆ ಸುಮಾರಿಗೆ ನಾನು ಮತ್ತು ಚಾಸಾ-4 ರವರು ಹಡಗಲಿಯಲ್ಲಿಯ ಮಸೀದಿಗೆ ನಮೂಜಿಗೆಂದು ಹೋಗಿ ಹೊರಬಂದಾಗ ಚಾಸಾ-1 ರವರು ನನ್ನ ಮೊಬೈಲಿಗೆ ಪೋನ್ ಮಾಡಿ ಈ ದಿನ ಬೆಗಿನ ಜಾವ 3.30 ಗಂಟೆಗೆ ಎಂದಿನಂತೆ ನಾನು ಮತ್ತು ನನ್ನ ಚಾಲಕ ಚಾಸಾ-2 ರವರು ಸೇರಿ ನಮ್ಮ ವಾಹನದಲ್ಲಿ ಕೋಳಿಗಳನ್ನು ತರಲು ಹಡಗಲಿಯಿಂದ ಕೊಟ್ಟೂರಿಗೆ ಇಟಗಿ ಮಾರ್ಗವಾಗಿ ಹೋಗುತ್ತಿದ್ದಾಗ ಇಟ್ಟಿಗಿಯಿಂದ ಕೊಟ್ಟೂರಿಗೆ ಹೋಗುವ ಟಾರ್ ರಸ್ತೆಯಲ್ಲಿ ದಿಬ್ಬಳಿ ಕ್ರಾಸಿನಿಂದ ಸ್ವಲ್ಪ ಮುಂದೆ ಬೆಳಿಗ್ಗೆ 4.15 ಗಂಟೆಗೆ 25-30 ವರ್ಷ ವಯಸ್ಸಿನ 3 ವ್ಯಕ್ತಿಗಳು 2 ಮೋಟಾರ್ ಸೈಕಲ್ಲುಗಳಲ್ಲಿ ಬಂದು ತಮಗೆ

ಅವಾಚ್ಯ ಶಬ್ದಗಳಿಂದ ಬೈದು ನಾವು ಪೋಲೀಸರು ನಾವು ಇಟಗಿಯಲ್ಲಿ ಕೈಮಾಡಿ ವಾಹನ ನಿಲ್ಲಿಸು ಎಂದರೂ ಹಾಗೆಯೇ ಬರುತ್ತೀರಾ ವಾಹನವನ್ನು ನಿಲ್ಲಿಸುತ್ತಿರೋ ಇಲ್ಲ ಅಂತಾ ನಮ್ಮ ವಾಹನವನ್ನು ನಿಲ್ಲಿಸಿ ನನಗೆ ಮತ್ತು ಚಾಲಕನಿಗೆ ಕೆಳಗೆ ಇಳಿಸಿ ನಮ್ಮ ವಾಹನದಲ್ಲಿದ್ದ ನಗದು ರೂ.1,02,600/- ಗಳ ಹಣದ ಚೀಲವನ್ನು ಮತ್ತು ಸುಮಾರು ರೂ.10,500/- ಬೆಲೆ ಬಾಳುವ ಎರಡು ಮೊಬೈಲುಗಳನ್ನು ನಮಗೆ ಹೊಡೆಬಡಿ ಮಾಡಿ ಕಿತ್ತುಕೊಂಡು ಹೋದ ವಿಷಯವನ್ನು ತಿಳಿಸಿದನೆಂದರೆ ಸರಿಯಲ್ಲ. ಆಗ ನಾವು ಚಾಸಾ-1 ರವರಿಗೆ ನೀನು ಇಟಗಿಗೆ ಬಾ ನಾವೂ ಸಹಾ ಇಟಗಿಗೆ ಬರುತ್ತಿವೆ ಅಂತಾ ತಿಳಿಸಿರುತ್ತೇವೆಂದರೆ ಸರಿಯಲ್ಲ. ಆಗ ನಾನು ಮತ್ತು ಚಾಸಾ-4 ರವರು ಸೇರಿ ಬೆಳಿಗ್ಗೆ 7.15 ಗಂಟೆಗೆ ಇಟಗಿ ಸರ್ಕಲ್ ಗೆ ಬಂದೆವು ಆಗ ಚಾಸಾ-1 ಮತ್ತು 2 ರವರೂ ಸಹಾ ಬಂದರು, ನಾವೆಲ್ಲರೂ ಕೂಡಿ ಪೊಲೀಸ್ ಠಾಣೆಗೆ ಹೋಗಿ ವಿಚಾರಿಸಿದಾಗ ಯಾರೋ ಅನಾಮಧೇಯ ವ್ಯಕ್ತಿಗಳು ಈ ರೀತಿ ಕೃತ್ಯವನ್ನು ಎಸಗಿರುತ್ತಾರಂತಾ ಖಚಿತಪಡಿಸಿಕೊಂಡು ಚಾಸಾ-1 ರವರಿಗೆ ಠಾಣೆಯಲ್ಲಿ ದೂರು ನೀಡಲು ಸೂಚಿಸಿರುತ್ತೇವೆಂದರೆ ಸರಿಯಲ್ಲ. ಅದರಂತೆ ಪೋಲೀಸರು ಪ್ರಕರಣವನ್ನು ದಾಖಲಿಸಿಕೊಂಡು ಚಾಸಾ-1 ರವರಿಗೆ ಘಟನೆಯ ವಿವರಣೆಯನ್ನು ನೀಡಿದ್ದು ಅದರಂತೆ ಘಟನೆಯ ಕುರಿತಾದ ಎಲ್ಲಾ ವಿಚಾರವನ್ನು ಪೋಲೀಸರು ನನ್ನ ಹೇಳಿಕೆಯಲ್ಲಿ ನಮೂದಿಸಿಕೊಂಡಿರುತ್ತಾರೆಂದರೆ ಸರಿಯಲ್ಲ. ಆ ವಿಚಾರ ನನಗೆ ತಿಳಿದಿರುತ್ತವೆಂದರೆ ಸರಿಯಲ್ಲ. ಮೇಲೆ ಹೇಳಿದಂತೆ ನಾನು ದಿಃ 24-06-2015 ರಂದು ಪೋಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೆವೆಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-7 ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ-7 ರಲ್ಲಿರುವಂತಹ ವಿಚಾರವನ್ನು ಸಂಪೂರ್ಣವಾಗಿ ಓದಿ ಹೇಳಲಾಗಿ ಅದನ್ನು ಸಾಕ್ಷಿಯು ನಿರಾಕರಿಸಿರುತ್ತಾರೆ. ಎಲ್ಲಾ ವಿಚಾರ ಗೊತ್ತಿದ್ದರೂ ಸಹಾ ಆರೋಪಿತರಿಗೆ ಸಹಾಯ ಮಾಡಲೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಮೇಲೆ ಹೇಳಿದ ನಿಪಿ-7 ರಂತೆ ಪೋಲೀಸರ ಮುಂದೆ ನಾನು ಹೇಳಿಕೆ ನೀಡಿದ್ದರೂ ಸಹಾ ನಾನು ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

<u>ಪಾಟೀ ಸವಾಲು. ಆರೋಪಿತರ ಪರ ವಕೀಲರಿಂದಃ- ಇಲ್ಲ</u>

ಮರು ವಿಚಾರಣೆ ಇಲ್ಲಃ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ